Sri J. P. SARWESH.—After issuing orders directing water supply schemes should be taken in scarcity areas irrespective of whether 10% contribution is there or not may I know how many villages in Gulbarga will be benefitted

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಯಾವ್ಯಾವ ಪಂಚಾಯತಿಗಳಿಗೆ ಅವಶ್ಯಕತೆ ಇವೆ' ಅಂಥ ಹಳ್ಳಿಗಳಿಗೆ ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ.

Sri D. B. KALMANKAR.—Has the Government instructed the P.H.D to go ahead with all such villages which have not paid contribution in view of scarcity of water in those areas

Sri M. MALLIKARJUNASWAMY. —Yes.

Ban on Inter-District Movements of Paddy and Rice

595 Smt. WINNIFRED F. FERNANDES (Coondapur).—

Will the Minister of State for Food and Civil Supplies be pleased to state :—

(*a*) whether it has come to the notice of the Government that since the coming into force of the ban on the inter-district movement of paddy and rice, stocks have accumulated with growers in Shimoga District, who are compelled to sell their produce to rice millers at Rs. 60 per quintal, for want of competitive buyers from other districts ;

(*b*) whether it is also a fact that the rice millers who corner such paddy are marking 100 per cent profit, by selling the same paddy at Rs. 120 per quintal to dealers of South Kanara, thus depriving the grower of his rightful share of profit ;

(c) if so, the action the Government proposes to take so set right the above matter ?

Smt. E. E. VAZ (Minister of State for Food and Civil Supplies).—

(*a*) No.

(*b*) No such instances have come to the notice of Government.

(c) Does not arise, in view of the ruplies to clases (*a*) and (*b*).

Smt. WINNIFRED F. FERNANEES.—May I know when this inter-district ban in Shimoga District came into force and what was the selling price of paddy then ?

†Smt. E. E. VAZ—It came into force as soon as we promulgated the Inter-District Movement of Food Grains restriction order in 1972.

Smt. WINNIERED F. FERNANDES.—What was the price of paddy then ?

Smt. E. E. VAZ.—It was betwean Rs. 65 and 70 per quintal.

Smt. WINNIFRED FERNANDES.—What was the selling and buying price paid by the grower to the deller two monts back ?

Smt. E. E. VAZ.—It ranged between Rs. 60 to 70 for coarse paddy.

ಶ್ರೀ ಟಿ. ಎಂ. ಮಂಜುನಾಥ್.—ತಾವು ನಮ್ಮ ರಾಜ್ಯದಲ್ಲಿ ಭತ್ತ ಮತ್ತು ಅಕ್ಕಿಯನ್ನು ಜಿಲ್ಲೆಯಿಂದ ಜಿಲ್ಲೆಗೆ ಸಾಗಿಸುವುದರ ಬಗ್ಗೆ ನಿರ್ಬಂಧವನ್ನು ಹಾಕಿರತಕ್ಕಂತಹ ಉದ್ದೇಶ ಏನು ಮತ್ತು ಅದನ್ನು ತೆಗೆಯುವುದರಿಂದ ಆಗತಕ್ಕಂತಹ ಹಾನಿಯಾದರೂ ಏನೆಂದು ತಿಳಿಸುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ರಿಸ್ಟ್ರಿಕ್ಷನ್ ಹಾಕಿರತಕ್ಕಂತಹ ಉದ್ದೇಶವೇನೆಂದರೆ ಯಾವ ಜಿಲ್ಲೆ ಸರ್ಪ್ಲಸ್ ಇದೆ, ಅದು ಇನ್ನೊಂದು ಜಿಲ್ಲೆಗೆ ಹೋದರೆ ಅಲ್ಲಿ ಸಮತೂಕವಾಗಬಹುದು. ಅದನ್ನು ತಪ್ಪಿಸುವುದೇ ಇದರ ಉದ್ದೇಶ, ಉದಾಹರಣೆಗೆ ಭತ್ತ ಮತ್ತು ಅಕ್ಕಿಯನ್ನು ದ. ಕ. ಜಿಲ್ಲೆಗೆ ಬಿಟ್ಟರೆ ಅಲ್ಲಿಗೆ ಜಾಸ್ತಿ ಹೋದ ಹಾಗೆ ಆಗುತ್ತದೆ. ಇದರಿಂದ ಆಯಾ ಜಿಲ್ಲೆಯಲ್ಲಿ ತಯಾರಾದ ಆಹಾರವನ್ನು ಆಯಾ ಜಿಲ್ಲೆಯಲ್ಲಿಯೇ ಉಳಿಸುವುದು ಉದ್ದೇಶ.

ಶ್ರೀ ಎಸ್. ಬಂಗಾರಪ್ಪ. ಈಗ ಬಜಾರಿನಲ್ಲಿ ಭತ್ತದ ಬೆಲೆ 100 ರೂಪಾಯಿ ಇದ್ದರೂ, ನಮ್ಮ ಸರ್ಕಾರೀ ಬೆಲೆ 50-60 ರೂಪಾಯಿ ಇರುತ್ತದೆ. ಇದರಿಂದ ಬೆಳೆದ ರೈತನಿಗೆ ನರಿಯಾದ ಬೆಲೆ ಸಿಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬೆಲೆಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಬಿ. ಬಾಸ್ಕರ ಶೆಟ್ಟಿ.—ಉತ್ತರ ಕೊಡುವಾಗ ಕೇರಳಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಜಾಸ್ತಿ ಅಕ್ಕಿ ಹೋಗುತ್ತಾ ಇರುವುದರಿಂದ, ಬ್ಯಾನ್ ಹಾಕಿದ್ದೇವೆಂದು ಹೇಳಿದಿರಿ. ಕೇರಳದಲ್ಲಿ ಒಂದು ಕೆ.ಜಿ. ಅಕ್ಕಿಗೆ 1-70 ಪೈಸೆ ಇರುವಾಗ ಅಲ್ಲಿಂದ ಅಕ್ಕಿ ಹೋಗಲಕ್ಕೆ ಕಾರಣ ಹೇಗೆ ಬರುತ್ತದೆ ? ಆದ್ದರಿಂದ ಈಗಿರತಕ್ಕ ಬ್ಯಾನನ್ನು ತೆಗೆದು ದಕ್ಷಿಣ ಕನ್ನಡ ಜಿಲ್ಲೆ ಡಿಫಿಸಿಟ್ ಏರಿಯಾ ಆಗಿರುವುದರಿಂದ ಬೇರೆ ಜಿಲ್ಲೆಗಳಿಂದ ಇಲ್ಲಿಗೆ ಅಕ್ಕಿ ಬರುವುದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಈಗಾಗಲೇ ಅದನ್ನು ಮಾಡಿದ್ದೇವೆ. ಅದಲ್ಲದೆ ಈಗಾಗಲೇ ಕೇರಳದಲ್ಲಿ ಎಲ್ಲ/ಪ್ರದೇಶಗಳಿಗಿಂತ ಅಕ್ಕಿಯ ದರ ಕಡಿಮೆ ಇದೆ. ಕೇರಳದಲ್ಲಿ ಅಕ್ಕಿ ಜಾಸ್ತಿ ಇರುವುದರಿಂದ ಅಲ್ಲಿಂದ ಅದು ಸ್ಮಗರ್ ಆಗುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ.

Smt. WINNIERED F. FERNANDES.—May I know whether you are trying to kill two birds in one shot ?

ಶ್ರೀಮತಿ ಇ. ಇ. ವಾಜ್.—ಮೊನ್ನೆ ತಾನೇ ಸೌತ್ ಕೆನರಾ ಸಹಕಾರ ಸಂಘದವರು ಶಿವಮೊಗ್ಗಾದಿಂದ ಭತ್ತ ಕೊಂಡು ಕೊಳ್ಳಲಕ್ಕೆ ಹೋದಾಗ ಇನ್ನು ಮುಂದೆ 85 ರೂಪಾಯಿಗಳಿಗಿಂತ ಜಾಸ್ತಿ ದರ ಹಾಕಬಾರದು ಎಂಬುದಾಗಿ ಸರ್ಕಾರದ ಆದೇಶವಿತ್ತು. ಆದರೂ ಆ ರೀತಿ ಮಾಡದೇ ಅಲ್ಲಿ 95 ರೂಪಾಯಿಗಳಂತೆ ಭತ್ತದ ದರವನ್ನು ನಿಗದಿ ಮಾಡಿ ಕೊಂಡು ಕೊಂಡಂಥ ವಿಷಯ ಮಾನ್ಯ ಸದಸ್ಯರಿಗೆ ಈಗಾಗಲೇ ಗಮನಕ್ಕೆ ಬಂದಿದೆ.

ಶ್ರೀ ಎ. ಎಂ. ಸೂರ್ಯನಾರಾಯಣ ಗೌಡ.—ಕಳ್ಳಸಾಗಾಣಿಕೆಯಲ್ಲಿ ಬಂಗಾಳದಲ್ಲಿ 5 ಸಾವಿರ, ಮಧ್ಯ ಪ್ರದೇಶದಲ್ಲಿ 3 ಸಾವಿರ ಮಹಾರಾಷ್ಟ್ರದಲ್ಲಿ ಹಾಗೂ ಕೇರಳ ಮುಂತಾದ ಸ್ಥಳಗಳಲ್ಲಿ ಸಾವಿರಾರು ಕೇಸುಗಳನ್ನು ಹಿಡಿದು ಜೈಲಿಗೆ ಕಳುಹಿಸಿದ್ದಾರೆ. ನಮ್ಮ ಸರ್ಕಾರದವರು ಇದುವರೆಗೆ ಎಷ್ಟು ಜನರನ್ನು ಆ ರೀತಿ ಹಿಡಿದು ಕೇಸು ಹಾಕಿ ಜೈಲಿಗೆ ಕಳುಹಿಸಿದ್ದಾರೆ ?

ಶ್ರೀಮತಿ ಇ. ಇ. ವಾಜ್.—ಅದಕ್ಕೆ ನೋಟೀಸ್ ಬೇಕು.